ಕೋರಿಕೆ ಮೇರೆಗೆ ನೀಲಮ್ಮನನ್ನು ಕರೆಸಲಾಯಿತು. ಕರಮಚಂದ ಆಕೆಯನ್ನು ವಿಚಾರಿಸಿದ.

"ನಾನು ಮಾಮೂಲು ಟೈಮಿಗೇ ಬಂದೆ. ಗುಡಿಸಿ, ವರೆಸಿ, ಹೋದಾಗ ಸುಮಾರು ಹತ್ತು ಗಂಟೆ ಆಗಿರಬಹುದು."

"ನೀನು ಬಂದಾಗ, ಈ ಫೈಲು ಮೇಜಿನ ಮೇಲೆ ಇತ್ತಾ?"

"ಇತ್ತು ಸಾರ್. ಅದನ್ನ ಎತ್ತಿ, ಮೇಜು ಕ್ಲೀನ್ ಮಾಡಿದ್ದೆ."

"ನೀಲಮ್ಮ, ಸರಿಯಾಗಿ ನೆನಪು ಮಾಡ್ಕೋ. ಆ ಫೈಲು ಅಲ್ಲಿ ಇರಲೇ ಇಲ್ಲ." ನಾಗರಾಜು ದನಿಯೇರಿಸಿ ನುಡಿದ.

"ಇತ್ತು ಸಾರ್. ನಾನ್ಯಾಕೆ ಸುಳ್ಳು ಹೇಳ್ಲೀ..." ನೀಲಮ್ಮ ಸಮರ್ಥಿಸಿಕೊಂಡಳು.

"ನೀಲಮ್ಮ, ನಿನ್ ಮನೆ ಎಲ್ಲಿ? ಎಲ್ಲೆಲ್ಲಾ ಕೆಲ್ಸಾ ಮಾಡ್ತಿ?" ಕರಮಚಂದ ವಿಷಯಾಂತರ ಮಾಡಿದ.

"ಬೆಳಗ್ಗೆಯೆಲ್ಲಾ ಒಟ್ಟು ನಾಲ್ಕು ಮನೇಲಿ ಕೆಲ್ಸ ಮಾಡ್ತೀನಿ. ಮಧ್ಯಾಹ್ನದ ಮೇಲೆ ಟೈಮ್ ಸಿಕ್ರೆ, ಗಂಡನ ಕೆಲ್ಸದಲ್ಲಿ ಸಹಾಯ ಮಾಡ್ತೀನಿ. ಅವ್ನು ಬಡಗಿ. ಚಿಕ್ಕ ಪುಟ್ಟ ದುರಸ್ತಿ ಕೆಲ್ಸ ಎಲ್ಲಾ ಮಾಡ್ತಾನೆ. ಆದ್ರೂ ಹಣ ಖರ್ಚಿಗೆ ಸಾಕಾಗಲ್ಲ. ತಾಯಿಗೆ ಹುಶಾರಿಲ್ಲ." ಆಕೆ ತನ್ನ ಪ್ರವರ ಹೇಳಿಕೊಂಡಳು.

"ನಾವೀಗ ಒಮ್ಮೆ ಮನೆಯ ಹಿಂಭಾಗದಲ್ಲಿ ಕಣ್ಣು ಹಾಯಿಸಿ ಬರ್ತೇವೆ."

ಹಿಂಭಾಗದಲ್ಲಿ ಇಂಟರ್‌ಲಾಕ್ ಹಾಕಿದ್ದುದು ನಮಗೆ ನಿರಾಸೆಯುಂಟು ಮಾಡಿತು. ಅಲ್ಲಿ ಯಾವುದೇ ಹೆಜ್ಜೆ ಗುರುತು ಸಿಗಲು ಸಾಧ್ಯವಿರಲಿಲ್ಲ. ನಾವು ಆ ಮುಚ್ಚಿದ್ದ ಕಿಟಕಿಯನ್ನು ಪರೀಕ್ಷಿಸಲು ತೊಡಗಿದೆವು.

"ಬಿದ್ದಪ್ಪ, ಇಲ್ಲಿ ನೋಡು. ಧೂಳು ಆವರಿಸಿರುವ ಬಾಗಿಲ ಮೇಲೆ ಮೂಡಿದ ಬೆರಳಿನ ಅಚ್ಚು! ಹೊಸದಾಗಿ ಆದಂತಿದೆ!! ಯಾರೋ ಬಲವಾಗಿ ಬಾಗಿಲನ್ನು ಈಚೆಗೆ ಎಳೆದಿದ್ದಾನೆ. ಬೇರೆಡೆಯೆಲ್ಲಾ ಧೂಳು ಹಾಗೇ ಇದೆ. ಹಾಗಿದ್ದರೆ ಈ ಬಾಗಿಲನ್ನು ತೆಗೆದು ಹೆಚ್ಚು ಸಮಯವಾದಂತಿಲ್ಲ!"

"ಆದರೆ, ಒಳಗಡೆಯಿಂದ ಚಿಲಕ ಹಾಕಿಯೇ ಇತ್ತಲ್ಲ!"

"ನೀನನ್ನುವುದು ಇನ್ನೊಂದು ರೀತಿಯಲ್ಲೂ ನಿಜ. ಚಿಲಕ ತೆಗೆದಿದ್ದರೆ, ಇಷ್ಟು ಆಳವಾಗಿ ಕೈಬೆರಳಚ್ಚು ಮೂಡುವ ಸಾಧ್ಯತೆಯಿಲ್ಲ. ಇದು ಬಲವಾಗಿ ಎಳೆದಾಗ ಮೂಡಿದ ಗುರುತುಗಳು!"

"ಹಾಗಿದ್ದರೆ ಬಾಗಿಲನ್ನು ಹೇಗೆ ತೆಗೆದರು?"

ನನ್ನ ಮಾತಿಗೆ ಪ್ರತಿಯಾಡದೆ ಕರಮಚಂದ ಸುತ್ತಮುತ್ತ ದೃಷ್ಟಿ ಹರಿಸಿದ. ಸುತ್ತಲೂ ಕಲ್ಲಿನ ಪಾಗಾರವಿತ್ತು. ಅಲ್ಲಿ ಮೂಲೆಯಲ್ಲಿ ಒಂದಿಷ್ಟು ಹರಿದ ಕಾಗದದ ಚೂರುಗಳು ಯಾರೋ ಎಸೆದಂತೆ ಬಿದ್ದಿದ್ದವು. ಇನ್ನೂ ಹೊಸತರಂತೆಯೇ ಇದ್ದ ಅವುಗಳನ್ನು ಎಸೆದು ಹೆಚ್ಚು ಸಮಯವಾದಂತಿರಲಿಲ್ಲ. ಕರಮಚಂದ ಅವುಗಳನ್ನೆತ್ತಿಕೊಂಡು, ಜೋಡಿಸಿ, ನಜರು ಓಡಿಸಿದ.

"ಬಿದ್ದಪ್ಪ, ಇಲ್ಲಿ ನೋಡು! ಈ ಪ್ರಕರಣ ನಾವು ನೆನೆಸಿದಕ್ಕಿಂತಲೂ ರೋಚಕವಾಗಿದೆ!!"

ನಾನು ಆತ ತೋರಿಸಿದ ಕಾಗದದಲ್ಲಿ ಆತುರದಿಂದ ಕಣ್ಣು ಹಾಯಿಸಿದೆ. ಆ ಕಾಗದದ ತುಂಡಿನಲ್ಲಿ ಮುದ್ರಿತವಾದ ವಾಕ್ಯ ಹೀಗಿತ್ತು:

"ನೀವು ನಮ್ಮ ತಂಡವನ್ನು ಸೇರಿಕೊಳ್ಳುವುದು ನಮ್ಮ ಭಾಗ್ಯ. ನಿಮಗೆ ಹಾರ್ದಿಕವಾದ ಸ್ವಾಗತ. ಶೀಘ್ರವಾಗಿ ವಿವರಗಳನ್ನು ಇತ್ಯರ್ಥಗೊಳಿಸುವ."

ಆ ವಾಕ್ಯದ ಕೆಳಗೆ 'ಮಲೆನಾಡು ಬಿಲ್ಡರ್ಸ್ ಪರವಾಗಿ' ಎಂದು ಮುದ್ರಿತವಾಗಿ ಕೆಳಗಡೆ ಸಹಿಯೊಂದು ಗೀಚಲ್ಪಟ್ಟಿತ್ತು!

"ಕರಮಚಂದ, ಈ ಪತ್ರ ನಾಗರಾಜುವಿಗೆ ಬಂದಿದ್ದಿರಬಹುದೇ?"

"ಇಲ್ಲಿ ಬಿದ್ದಿದ್ದ ಕಾರಣ ಹಾಗೇ ಅನಿಸುತ್ತದೆ. ಆದರೆ, ಈ ಪತ್ರದ ಉಳಿದ ಭಾಗ ಎಲ್ಲಿ ಹೋಯಿತು?"